ಇಲಾಖೆ / ವಿಷಯ : DEPARTMENT / SUBJECT: ಗ್ರಾ ... KPSC

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ ದಿನಾಂಕ : DATE 25/1/21

ಕನ್ನಡಪ್ರಭ ಸಂಪಾದಕೀಯ

# ಮತ್ತೆ ಪ್ರಶ್ನೆಪತ್ರಿಕೆ ಸೋರಿಕೆ: ಲೀಕಾಸುರರಿಗೆ ಶಾಸ್ತಿ ಆಗಲಿ

ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕರ (ಎಫ್‌ಡಿಎ) ಹುದ್ದೆಗಳ ನೇಮಕಾತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಲುದ್ದೇಶಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಯ ಮುನ್ನಾ ದಿನ ಪ್ರಶ್ನೆಪತ್ರಿಕೆ ಸೋರಿಕೆಯಾಗಿ ಪರೀಕ್ಷೆಯೇ ಮುಂದೂಡಿಕೆಯಾಗಿರುವುದು ನಿಜಕ್ಕೂ ಕಳವಳಕಾರಿ ಬೆಳವಣಿಗೆ. 2020ರ ಮೇನಲ್ಲೇ ನಡೆಯಬೇಕಿದ್ದ ಎಫ್‌ಡಿಎ ಪರೀಕ್ಷೆ ಕೊರೋನಾ ಕಾರಣದಿಂದಾಗಿ ಮುಂದೂಡಿಕೆಯಾಗಿ ನಿನ್ನೆ (ಜನವರಿ 24) ಭಾನುವಾರ ನಿಗದಿಯಾಗಿತ್ತು. ಈಗ ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣಕ್ಕೆ ಪರೀಕ್ಷೆ ಮತ್ತೆ ಮುಂದಕ್ಕೆ ಹೋಗಿರುವುದರಿಂದ ಅಭ್ಯರ್ಥಿಗಳು ತಮ್ಮದಲ್ಲದ ತಪ್ಪಿಗೆ ಇನ್ನಷ್ಟು ದಿನಗಳನ್ನು ಅನಿವಾರ್ಯವಾಗಿ ದೂಡಬೇಕಾದ ದುಸ್ಥಿತಿಗೆ ತಲುಪುವಂತಾಗಿದೆ.

ರಾಜ್ಯದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಎಂಬುದು ಹಳೆಯ ಪಿಡುಗು. ಶಿವಕುಮಾರಯ್ಯ ಎಂಬಾತನ ಗ್ಯಾಂಗ್ 2016ರಲ್ಲಿ ದ್ವಿತೀಯ ಪಿಯುಸಿ ವಿಜ್ಞಾನ ಪ್ರಶ್ನೆಪತ್ರಿಕೆಗಳನ್ನು ಸೋರಿಕೆ ಮಾಡುವ ಮೂಲಕ ಅಂದಿನ ಸರ್ಕಾರ ತಲೆತಗ್ಗಿಸುವಂತೆ ಮಾಡಿತ್ತು. ಶಿವಕುಮಾರಯ್ಯ ಬಂಧನಕ್ಕೆ ಒಳಗಾಗಿ, ಜಾಮೀನು ಪಡೆದಿದ್ದೂ ಆಯಿತು. ಪ್ರಶ್ನೆಪತ್ರಿಕೆ ಸೋರಿಕೆ ಹಗರಣಗಳಿಗೆ ಅಂತ್ಯವಂತೂ ಸಿಕ್ಕಿಲ್ಲ. ಈಗ ಕೆಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲೂ ಈ ಪಿಡುಗು ಕಾಣಿಸಿಕೊಂಡಿದೆ ಎಂದಾದರೆ ಇದರ ಬೇರುಗಳು ಎಷ್ಟು ಆಳವಾಗಿರಬಹುದು?. ಕೆಪಿಎಸ್‌ಸಿ ಎಂಬುದು ಮೊದಲೇ ಅಕ್ರಮ ನೇಮಕಾತಿಗಳಿಂದ ಹಲವು ಬಾರಿ ವಿವಾದಕ್ಕೀಡಾಗಿರುವ ಸಂಸ್ಥೆ. ಕೆಪಿಎಸ್‌ಸಿಯಲ್ಲಿ ಆಮೂಲಾಗ್ರ ಸುಧಾರಣೆ ತರುವುದಾಗಿ ಸರ್ಕಾರಗಳು ಕಾಲಕಾಲಕ್ಕೆ ಹೇಳಿಕೊಳ್ಳುತ್ತಿವೆಯಾದರೂ, ಆ ಸುಧಾರಣೆ ಎಷ್ಟು ಪರಿಣಾಮಕಾರಿಯಾಗಿ ಜಾರಿಗೆ ಬಂದಿದೆ ಎಂಬುದನ್ನು ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ ಎತ್ತಿ ತೋರಿಸುತ್ತಿದೆ.

> ಕೆಪಿಎಸ್‌ಸಿ ಒಳಗೇ ಇರುವ ಅಧಿಕಾರಿ ಅಥವಾ ಸಿಬ್ಬಂದಿಯ ಸಂಪೂರ್ಣ ಸಹಕಾರ ಇಲ್ಲದೆ ಪ್ರಶ್ನೆಪತ್ರಿಕೆ ಸೋರಿಕೆ ಸಾಧ್ಯವಿಲ್ಲ.

ಸರ್ಕಾರಿ ಉದ್ಯೋಗ ಪಡೆಯಬೇಕು ಎಂಬುದು ಬಹುತೇಕರ ಜೀವನದ ಅತಿದೊಡ್ಡ ಕನಸು. ಇದಕ್ಕಾಗಿ ಹಗಲು-ರಾತ್ರಿ ಎನ್ನದೆ ವ್ಯಾಸಂಗ ಮಾಡುವ, ಟ್ಯೂಷನ್ ಪಡೆಯುವ, ಪ್ರಾಮಾಣಿಕವಾಗಿ ಪರೀಕ್ಷೆ ಎದುರಿಸುವ ಅಭ್ಯರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಕೆಪಿಎಸ್‌ಸಿ 1112 ಎಫ್‌ಡಿಎ ಹುದ್ದೆಗಳ ನೇಮಕಾತಿಗೆ ಭಾನುವಾರ ನಡೆಸಲು ಉದ್ದೇಶಿಸಿದ್ದ ಪರೀಕ್ಷೆಗೆ ಹಾಜರಾಗಲು 3.74 ಲಕ್ಷ ಅಭ್ಯರ್ಥಿಗಳು ತುದಿಗಾಲಿನಲ್ಲಿ ನಿಂತಿದ್ದರು ಎಂದರೆ ಸರ್ಕಾರಿ ಹುದ್ದೆಯ ಮೇಲೆ ಜನರಿಗಿರುವ ಸೆಳೆತದ ಅರಿವಾಗುತ್ತದೆ. ಆದರೆ ಹಣ ಹೊಂದಿರುವ ಕೆಲವು ಅಭ್ಯರ್ಥಿಗಳು ಪರೀಕ್ಷಾ ವ್ಯವಸ್ಥೆಯನ್ನೇ ಕೊಳ್ಳಲು ಮುಂದಾದರೆ ನಿಜಕ್ಕೂ ಅನ್ಯಾಯವಾಗುವುದು ಪ್ರಾಮಾಣಿಕ ಅಭ್ಯರ್ಥಿಗಳಿಗೆ. ಹಣದಾಸೆಗೆ ನೀಚ ಕೆಲಸಕ್ಕೆ ಇಳಿಯುವ ಕೆಲವು ಅಪ್ರಾಮಾಣಿಕರಿಂದಾಗಿ 'ಸ್ಪರ್ಧಾತ್ಮಕ ಪರೀಕ್ಷೆ' ಎಂಬುದು ಅರ್ಥ ಕಳೆದುಕೊಳ್ಳುವಂತಾಗುತ್ತಿದೆ. ಈ ರೀತಿ ಅಪ್ರಾಮಾಣಿಕ ಮಾರ್ಗದಿಂದ ನೇಮಕಾತಿಯಾದವರು ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಾರೆ ಎಂಬುದನ್ನು ನಿರೀಕ್ಷಿಸುವುದು ಹೇಗೆ?

ಎಫ್‌ಡಿಎ ಪರೀಕ್ಷೆ ಹಗರಣದಲ್ಲಿ 14 ಮಂದಿಯನ್ನು ಬೆಂಗಳೂರು ಪೊಲೀಸರು ಬಂಧಿಸಿದ್ದಾರೆ. ಪ್ರಶ್ನೆಪತ್ರಿಕೆ ಸೋರಿಕೆಗಳಿಂದ ಕುಖ್ಯಾತಿಗೀಡಾಗಿರುವ ಶಿವಕುಮಾರಯ್ಯ ಗ್ಯಾಂಗ್ ಕೈವಾಡ ಏನಾದರೂ ಈ ಪ್ರಕರಣದಲ್ಲಿ ಇದೆಯೇ ಎಂಬುದನ್ನು ತನಿಖೆ ನಡೆಸುವುದಾಗಿ ಬೆಂಗಳೂರು ಪೊಲೀಸರು ಈಗಾಗಲೇ ತಿಳಿಸಿದ್ದಾರೆ. ಅಭ್ಯರ್ಥಿಗಳಿಂದ ತಲಾ 10 ಲಕ್ಷ ರು. ಹಣ ಪಡೆದು ಪ್ರಶ್ನೆ ಪತ್ರಿಕೆಯನ್ನು ಬಂಧಿತರ ತಂಡ ನೀಡುತ್ತಿತ್ತು. ಬೆಂಗಳೂರಿನ ಮನೆಯೊಂದರಲ್ಲಿ ಪ್ರಶ್ನೆಪತ್ರಿಕೆಗಳಿಗೆ ಉತ್ತರಗಳನ್ನೂ ಹೇಳಿಕೊಡುತ್ತಿತ್ತು ಎಂದು ವರದಿಯಾಗಿವೆ. ಬಂಧಿತರ ಪೈಕಿ ಒಬ್ಬಾತ ವಾಣಿಜ್ಯ ತೆರಿಗೆ ಇಲಾಖೆಯ ಇನ್ಸ್‌ಪೆಕ್ಟರ್! ಈತ ಇಲಾಖೆಗೆ 2017ರಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿ ನೇಮಕಗೊಂಡಿದ್ದಾತ. ಚಂದ್ರು ಎಂಬ ಈ ಅಧಿಕಾರಿ ತಾನು ನೇಮಕವಾಗುವಾಗಲೂ ಇದೇ ರೀತಿಯ ಅಡ್ಡದಾರಿ ತುಳಿದಿದ್ದನೆ ಎಂಬುದು ಮೊದಲು ಪತ್ತೆಯಾಗಬೇಕಿದೆ. ಈ ತನಿಖೆ ಇನ್ನಷ್ಟು ಆಳಕ್ಕೆ ಹೋಗಿ, ಇದರಲ್ಲಿ ಭಾಗಿಯಾದ ಎಲ್ಲರಿಗೂ ಸೂಕ್ತ ಶಿಕ್ಷೆಯಾಗಬೇಕಿದೆ. ಕೆಪಿಎಸ್‌ಸಿ ಒಳಗೇ ಇರುವ ಅಧಿಕಾರಿ ಅಥವಾ ಸಿಬ್ಬಂದಿಯ ಸಂಪೂರ್ಣ ಸಹಕಾರ ಇಲ್ಲದೆ ವಾಣಿಜ್ಯ ತೆರಿಗೆ ಅಧಿಕಾರಿ ಮತ್ತು ಆತನ ತಂಡದ ಕೈಗೆ ಪ್ರಶ್ನೆ ಪತ್ರಿಕೆ ಸಿಗಲು ಸಾಧ್ಯವಿಲ್ಲ. ಹೀಗಾಗಿ ಪ್ರಶ್ನೆ ಪತ್ರಿಕೆ ಸೋರಿಕೆಯ ಮೂಲಕ್ಕೇ ಸರ್ಕಾರ ಹೋಗಿ ಬುಡ ಸಮೇತ ಕಿತ್ತುಹಾಕಬೇಕಿದೆ. ಪ್ರಾಮಾಣಿಕ ಅಭ್ಯರ್ಥಿಗಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವ ಜರೂರು ಇದೆ.